# ಶ್ರೀ ಶಂಕರರು ಲೋಕಶಂಕರರೇ ಸರಿ!

**ಶ್ರೀ ಶ್ರೀಮದ್ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳು**

ಶ್ರೀ ಶಂಕರ ಭಗವತ್ಪಾದರು ವಿಶ್ವದ ತತ್ತ್ವಜ್ಞಾನಿಗಳ ಸಮೂಹದ ಧ್ರುವತಾರೆ, ನಿರಂತರ ಅಧ್ಯಾತ್ಮಜ್ಞಾನವೆಂಬ ಕಿರಣಗಳನ್ನೀಯುವ ಸೂರ್ಯ, ಸಂಸಾರದ ತೊಳಲಾಟದಲ್ಲಿ ಬಳಲುತ್ತಿರುವವರಿಗೆ ಆಹ್ಲಾದವನ್ನುಂಟುಮಾಡುವ ಚಂದ್ರ, ತತ್ತ್ವಜಿಜ್ಞಾಸೆಯನ್ನು ಮಾಡುತ್ತಿರುವ ಬುದ್ಧಿವಂತರಿಗೆ ಹೊಸ ಆಲೋಚನೆಗಳೆಂಬ ವಿದ್ಯುತ್ (ಮಿಂಚು), ಹೀಗೆ ಇನ್ನೂ ಏನೇನೋ ಆಗಿದ್ದಾರೆ.

ಅವರು ತತ್ತ್ವಜ್ಞಾನಿಗಳೆಂಬ ನಕ್ಷತ್ರಗಳ ಸಮೂಹದಲ್ಲಿ ಧ್ರುವ ನಕ್ಷತ್ರವಿದ್ದಂತೆ. ಧ್ರುವ ನಕ್ಷತ್ರಕ್ಕೆ ಹೆಚ್ಚು ಪ್ರಭೆಯಿರುತ್ತದೆ. ಅಲ್ಲದೇ ಅದು ಬದಲಾಗದೇ ಒಂದೇ ಸ್ಥಾನದಲ್ಲಿರುತ್ತದೆ. ಹಾಗೆ ಶ್ರೀ ಶಂಕರರ ಜ್ಞಾನ ಪ್ರಭೆ ಅಸದೃಶವಾದದ್ದು. ಎಲ್ಲ ವೇದ ಶಾಸ್ತ್ರಗಳನ್ನು ಬುದ್ಧಿಯಲ್ಲಿರಿಸಿಕೊಂಡು ಅವರು ಬರೆದಿರುವ ಪ್ರಸ್ಥಾನ-ತ್ರಯ ಭಾಷ್ಯಗಳು ಅವರ ಜ್ಞಾನ ಪ್ರಭೆಯ ಪ್ರಖರತೆಯನ್ನು ಹೇಳುತ್ತವೆ. ತತ್ತ್ವಜ್ಞಾನಿಗಳ ಸಮೂಹದಲ್ಲಿ ಕೆಲವು ತತ್ತ್ವಜ್ಞಾನಿಗಳ ಹೆಸರು ಕಾಲಕಳೆದಂತೆ ಹಿಂದೆ ಸರಿದುಹೋಗುತ್ತದೆ. ಹಾಗೆ ಆಗದೇ ಸಾವಿರಾರು ವರ್ಷಗಳ ನಂತರವೂ ಶ್ರೀ ಶಂಕರರ ವಿಚಾರಗಳು ಸಮಾಜದಲ್ಲಿ ಪ್ರಸ್ತುತತೆಯನ್ನಿಟ್ಟುಕೊಂಡು ಮುಂದುವರಿಯುತ್ತಿರುವುದನ್ನು ನೋಡಿದಾಗ ಶ್ರೀ ಶಂಕರರ ಸ್ಥಾನ ಬದಲಾಗದೇ ಇರುವುದು ಗೊತ್ತಾಗುತ್ತದೆ.

ಶ್ರೀ ಶಂಕರರರೆಂದರೆ ಅಧ್ಯಾತ್ಮಜ್ಞಾನದ ಸೂರ್ಯ. ಕೆಲವರು ಅಧ್ಯಾತ್ಮದ ಸಾಧಕರಿರುತ್ತಾರೆ. ಅವರಿಗೆ ತರ್ಕಶಾಸ್ತ್ರದಂತೆ ವೇದಾಂತಗಳನ್ನು ಓದಿ ತಿಳಿದುಕೊಳ್ಳಲು ಇಷ್ಟವಿರುವುದಿಲ್ಲ. ಆದರೆ ತಮ್ಮ ಸಾಧನೆಗೆ ಅನುಭವಾತ್ಮಕವಾದ ಮಾರ್ಗದರ್ಶನವನ್ನು ಮಾತ್ರ ಅವರು ಇಷ್ಟಪಡುತ್ತಾರೆ. ಅಲ್ಲದೇ ತಮ್ಮ ಸಾಧನೆಯ ಮಾರ್ಗದಲ್ಲಿ ಬರುವ ಸಂಶಯ ಅಥವಾ ಪ್ರಶ್ನೆಗಳಿಗೆ ಅನುಭವಾತ್ಮಕವಾದ ಪರಿಹಾರವನ್ನು ಅವರು ಅಪೇಕ್ಷಿಸುತ್ತಾರೆ. ಇಂತಹ ಮಾರ್ಗದರ್ಶನ ಮತ್ತು ಸಂಶಯ-ಪ್ರಶ್ನೆಗಳ ಪರಿಹಾರಗಳು ಶ್ರೀ ಶಂಕರರ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತವೆ. ಅವರ ಭಾಷ್ಯಗ್ರಂಥಗಳು ಮತ್ತು ಪ್ರಕರಣಗ್ರಂಥಗಳನ್ನು ಚಿಂತನೆ ಮಾಡುವ ಹವ್ಯಾಸ ರೂಢಿಯಲ್ಲಿದ್ದರೆ ಅಂಥವರಿಗೆ ಇದು ಅನುಭವಗೋಚರವಾಗುತ್ತದೆ. **"ಹೃದಯಕಮಲಮಧ್ಯೇ ದೀಪವತ್ ವೇದಸಾರಂ ಪ್ರಣವಮಯಮತರ್ಕ್ಯಂ ಯೋಗಿಭಿರ್ಧ್ಯಾನಗಮ್ಯಮ್ । ಹರಿಗುರುಶಿವಯೋಗಂ ಸರ್ವಭೂತಸ್ಥಮೇಕಂ ಸಕೃದಪಿ ಮನಸಾ ವೈ ಚಿಂತಯೇತ್ ಯಃ ಸ ಮುಕ್ತಃ ॥"** ಇದು ಶ್ರೀ ಶಂಕರಾಚಾರ್ಯ ಪ್ರಣೀತ "ಬ್ರಹ್ಮಾನುಚಿಂತನಮ್" ಎಂಬ ಪ್ರಕರಣಗ್ರಂಥದ ಕೊನೆಯ ಶ್ಲೋಕ. ಹೃದಯಕಮಲದ ಮಧ್ಯದಲ್ಲಿ ಪ್ರಣವಾತ್ಮಕನಾದ ಪರಮಾತ್ಮನ ಚಿಂತನೆಯನ್ನು ಹೇಳುವ ಶ್ಲೋಕವಿದು. (ಹೃದಯವೆಂಬ ಕಮಲದ ಮಧ್ಯದಲ್ಲಿ ದೀಪದಂತಿರುವ ಪರಮಾತ್ಮನನ್ನು ಚಿಂತನೆ ಮಾಡಬೇಕು. ಅವನು ಹೇಗಿದ್ದಾನೆ? ವೇದಗಳ ಸಾರವಾಗಿರುವ ಪ್ರಣವಸ್ವರೂಪಿಯಾಗಿದ್ದಾನೆ. ಸಾಮಾನ್ಯ ಮನುಷ್ಯನ ಊಹೆಗೆ ನಿಲುಕದವನಾಗಿದ್ದಾನೆ. ಯೋಗಿಗಳಿಗೆ ಧ್ಯಾನದಲ್ಲಿ ಗೋಚರಿಸುವವನಾಗಿದ್ದಾನೆ. ಹರಿ, ಗುರು, ಶಿವ ಈ ಮೂವರೂ ಒಂದಾದ ಸ್ಥಿತಿ ಅವನು. ಎಲ್ಲ ಜೀವಿಗಳ ಒಳಗೂ ಆತನಿದ್ದಾನೆ. ಇಂತಹ ಪರಮಾತ್ಮನನ್ನು ಇಲ್ಲಿ ಹೇಳಿರುವ ರೀತಿಯಲ್ಲಿ ಒಮ್ಮೆ ಧ್ಯಾನಿಸಿದವನು ಮುಕ್ತಿಯನ್ನು ಹೊಂದುತ್ತಾನೆ, ಇದು ಈ ಶ್ಲೋಕದ ಪೂರ್ತಿ ತಾತ್ಪರ್ಯ.) ಇಲ್ಲಿ ಅಧ್ಯಾತ್ಮಸಾಧಕರಿಗೆ ಬೇಕಾಗಿರುವ ನೇರ

ನುಡಿಯನ್ನು ಕಾಣಬಹುದು. ಪ್ರಶ್ನೋತ್ತರ ರತ್ನಮಾಲಿಕಾ, ಯೋಗತಾರಾವಳೀ, ಉಪದೇಶಪಂಚಕ, ಪ್ರಬೋಧಸುಧಾಕರ ಮುಂತಾದ ಅನೇಕ ಪ್ರಕರಣಗ್ರಂಥಗಳಲ್ಲಿ ಅವರು ಅಧ್ಯಾತ್ಮಸಾಧಕರ ಸಾಧನೆಗೆ ಬೇಕಾಗುವ ಮಾರ್ಗದರ್ಶನವನ್ನು ನೇರ ನುಡಿಗಳಿಂದ ನೀಡಿರುವುದನ್ನು ಕಾಣಬಹುದು. ಹಿರಿದಾದ ಅನುಭವವಿಲ್ಲದವರ ಮುಖದಿಂದ ಇಂತಹ ಮಾತುಗಳು ಬರಲು ಸಾಧ್ಯವಿಲ್ಲ. ಆದ್ದರಿಂದಲೇ ಹೇಳಿದ್ದು, ಶ್ರೀ ಶಂಕರರು ಅಧ್ಯಾತ್ಮ ಜ್ಞಾನವೆಂಬ ಕಿರಣಗಳನ್ನೀಯುವ ಸೂರ್ಯ.

ಸಂಸಾರದ ನೋವುಗಳಲ್ಲಿ ಬಳಲಿದ ಮನಸ್ಸಿಗೆ ಅವರು ಸಮಾಧಾನವನ್ನು ನೀಡಬಲ್ಲರು. ಅವರ ಗ್ರಂಥಗಳು ಬಳಲಿದ ಮನಸ್ಸಿಗೆ ಚಂದ್ರನಂತೆ ಆಹ್ಲಾದವನ್ನುಂಟುಮಾಡುತ್ತವೆ. ಪ್ರಸನ್ನ-ಗಂಭೀರ ಶೈಲಿಯ ಅವರ ಭಾಷ್ಯವಾಕ್ಯಗಳಲ್ಲಿಯೂ ಇದನ್ನು ಕಾಣಬಹುದು. ವಿಶೇಷವಾಗಿ ಸ್ತೋತ್ರಗ್ರಂಥಗಳಲ್ಲಿ ಇದನ್ನು ವಿಪುಲವಾಗಿ ಕಾಣಬಹುದು. ಶಿವಾನಂದ ಲಹರಿಯಲ್ಲಿ ಒಂದು ಶ್ಲೋಕ ಹೀಗೆ ಬರುತ್ತದೆ- **"ವಟುರ್ವಾ ಗೇಹೀ ವಾ ಯತಿರಪಿ ಜಟೀ ವಾ ತದಿತರೋ । ನರೋ ವಾ ಯಃ ಕಶ್ಚಿತ್ ಭವತು ಭವ ಕಿಂ ತೇನ ಭವತಿ॥ ಯದೀಯಂ ಹೃತ್ಪದ್ಮಂ ಯದಿ ಭವದಧೀನಂ ಪಶುಪತೇ । ತದೀಯಸ್ತ್ವಂ ಶಂಭೋ ಭವಸಿ ಭವಭಾರಂ ಚ ವಹಸಿ ॥"** "ಹೇ ಭವನೇ! ಮನುಷ್ಯನು ಬ್ರಹ್ಮಚಾರಿಯಾಗಿರಲಿ, ಗೃಹಸ್ಥನಾಗಿರಲಿ, ವಾನಪ್ರಸ್ಥನಾಗಿರಲಿ, ಅಥವಾ ಸಂನ್ಯಾಸಿಯಾಗಿರಲಿ ಅಥವಾ ಇನ್ನೇನಾದರೂ ಆಗಿರಲಿ, ಅದರಿಂದ ಆಗುವದೇನು? ಯಾರ ಮನಸ್ಸು ನಿನಗೆ ಸಮರ್ಪಿಸಿದ್ದರಿಂದ ನಿನ್ನ ಅಧೀನವಾಗಿದೆಯೋ, ಅಂಥವರಿಗೆ ನೀನು ತುಂಬಾ ಆತ್ಮೀಯನಾಗಿಬಿಡುತ್ತೀಯಾ. ಅದೆಷ್ಟು ಆತ್ಮೀಯನೆಂದರೆ ಅವರ ಭವಭಾರವನ್ನೆಲ್ಲಾ ನೀನೇ ನಿರ್ವಹಿಸುತ್ತೀಯೆ. ಹೇ ಪಶುಪತಿಯೇ! ನಿನ್ನ ಭಕ್ತವಾತ್ಸಲ್ಯವನ್ನು ವರ್ಣಿಸಲು ಶಬ್ದಗಳಿಲ್ಲ". ಸಂಸಾರದ ಭಾರವನ್ನು ತಾಳಲಾರದ ವ್ಯಕ್ತಿಗೆ ಈ ಪ್ರಾರ್ಥನೆಯು ತುಂಬಾ ಹಿತವೆನಿಸುತ್ತದೆ.

ಶ್ರೀ ಶಂಕರರು ಅಪ್ರತಿಮ ಮೇಧಾವಿಗಳೆಂಬುದಾಗಿ ಇತಿಹಾಸ ಗುರುತಿಸುತ್ತದೆ. ಅದಕ್ಕೆ ಅವರ ಗ್ರಂಥಗಳೇ ಇಂದಿಗೂ ಸಾಕ್ಷಿ. ಆ ಗ್ರಂಥಗಳನ್ನು ಅನೇಕ ಸಲ ಓದಿದಾಗ ಅನೇಕ ವಿಧದ ಚಿಂತನೆಗಳು ಹೊಳೆಯುತ್ತವೆ. ವಿಶೇಷತಃ ಅವರ ಭಾಷ್ಯಗ್ರಂಥಗಳಲ್ಲಿ ಇದು ಹೆಚ್ಚು ಅನುಭವಕ್ಕೆ ಬರುತ್ತದೆ. ಅವರ ಭಾಷ್ಯಗಳು ಪ್ರಸನ್ನ-ಗಂಭೀರವಾದ ಶೈಲಿಯಲ್ಲಿ ರಚಿಸಲ್ಪಟ್ಟವುಗಳೆಂದು ಆಗಲೇ ಹೇಳಿದ್ದೇವೆ. ಇದನ್ನು ವಾಚಸ್ಪತಿಮಿಶ್ರರು ಮೊದಲೇ ಹೇಳಿದ್ದಾರೆ. **"ನತ್ವಾ ವಿಶುದ್ಧವಿಜ್ಞಾನಂ ಶಂಕರಂ ಕರುಣಾಕರಮ್ । ಭಾಷ್ಯಂ ಪ್ರಸನ್ನ-ಗಂಭೀರಂ ತತ್ಪ್ರಣೀತಮ್ ವಿಭಜ್ಯತೇ ॥"** ಎಂಬುದಾಗಿ ಅವರು ಹೇಳುತ್ತಾರೆ. "ಶುದ್ಧ ಅನುಭವ (ಸ್ಪಷ್ಟ ಬ್ರಹ್ಮಸಾಕ್ಷಾತ್ಕಾರವೆಂಬ ಅನುಭವ) ವುಳ್ಳ, ಕರುಣೆಯಿಂದ ಕೂಡಿದ ಶ್ರೀ ಶಂಕರರನ್ನು ನಮಸ್ಕರಿಸುತ್ತೇನೆ. ಅಲ್ಲದೇ ಅವರು ಬರೆದಿರುವ ಪ್ರಸನ್ನ-ಗಂಭೀರ ಭಾಷ್ಯವನ್ನು ಕುರಿತು ವ್ಯಾಖ್ಯಾನವನ್ನು ಬರೆಯುತ್ತೇನೆ. 'ಪ್ರಸನ್ನ' ಎಂದರೆ ಓದಿದಾಗ ಮನಸ್ಸಿಗೆ ಪ್ರಸನ್ನತೆಯನ್ನುಂಟುಮಾಡುವ ಶೈಲಿ. 'ಗಂಭೀರ'ವೆಂದರೆ ಆಳವಾದ ಅರ್ಥವುಳ್ಳದ್ದು. ಅರ್ಥದ ಆಳವೇ ಬುದ್ಧಿವಂತರನ್ನು ಹೆಚ್ಚು ಗಮನ ಸೆಳೆಯುತ್ತದೆ. ಶ್ರೀಶಂಕರರ ಭಾಷ್ಯವು ಆಳವಾದ ಅರ್ಥ- ಅಭಿಪ್ರಾಯಗಳನ್ನಿಟ್ಟುಕೊಂಡಿದ್ದರಿಂದಲೇ ಅದಕ್ಕೆ ಅನೇಕ ವ್ಯಾಖ್ಯಾನಗಳು-ಪ್ರಸ್ಥಾನಗಳು ಹುಟ್ಟಿಕೊಂಡಿವೆ. ಅವೆಲ್ಲವೂ ಅತ್ಯಂತ ಸಮರ್ಥನೀಯವಾಗಿಯೇ ಭಾಷ್ಯಕಾರರ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತವೆ.

ಒಟ್ಟಾರೆ ಬುದ್ಧಿವಂತರ ಬುದ್ಧಿಶಕ್ತಿಗೆ ಗ್ರಾಸವನ್ನು ನೀಡುವ, ಭಾವುಕರ ಭಕ್ತಿಗೆ ಪೋಷಣೆಯನ್ನು ನೀಡುವ, ಸಂಕಟದಲ್ಲಿರುವವರ ಸಂಕಟವನ್ನು ನೀಗಿಸುವ ಶ್ರೀ ಶಂಕರರು ಲೋಕಶಂಕರರೇ ಸರಿ.